ಬಿದ್ದು ಹೋದ ಕಾರಣ ಕಟ್ಟಡಗಳೆಲ್ಲ ಈಗ ಬರೇ ಗೋದಾಮುಗಳಾಗಿದ್ದವು. ಅತ್ಯಂತ ಕಡಿಮೆ ಬಾಡಿಗೆಗೆ ದೊರಕುತ್ತಿದ್ದುದರಿಂದ ನಮ್ಮ ಕಂಪೆನಿಯೂ ಅಲ್ಲೊಂದು ಕಟ್ಟಡವನ್ನು ಬಾಡಿಗೆಗೆ ಪಡೆದುಕೊಂಡಿತ್ತು. ಅಪರೂಪಕ್ಕೆ ಬೇಕಾಗುವ ಹೆವಿ ಮಷಿನರಿ ಬಿಡಿಭಾಗಗಳ ಶೇಖರಣೆಗೆ ನಾವದನ್ನು ಬಳಸಿಕೊಳ್ಳುತ್ತಿದ್ದೆವು. ಕೆಲವು ಬೆಲೆಬಾಳುವ ಬಿಡಿಭಾಗಗಳಿದ್ದ ಕಾರಣ ಅಲ್ಲಿ ನಮಗೊಬ್ಬ ಕಾವಲುಗಾರನ ಅವಶ್ಯಕತೆಯಿತ್ತು. ಜನರೇ ಇಲ್ಲದ ಸುಡುವ ಮರುಭೂಮಿಯ ನಡುವೆ ನಿಲ್ಲಲಾಗದೆ ನೇಮಿಸಿದ ಹುಡುಗರೆಲ್ಲ ಮೂರ್ನಾಲ್ಕು ತಿಂಗಳಲ್ಲೇ ಕೆಲಸಬಿಟ್ಟು ಹೋಗುತ್ತಿದ್ದರು. ಶಾಶ್ವತವಾಗಿ ನಿಲ್ಲುವ ವಾಚ್‌ಮ್ಯಾನ್ ಒಬ್ಬ ಬೇಕೆಂದು ಹೇಳಿದಾಗ ನಮ್ಮ ಸಾಹುಕಾರರ ಪರಿಚಯದ ಅರಬಿಯೊಬ್ಬರು ಈತನನ್ನು ಕಳುಹಿಸಿದ್ದರು.

ಕೆಲಸಕ್ಕೆ ಸೂಕ್ತವಾದ ವಿದ್ಯಾಭ್ಯಾಸ, ಅನುಭವ ಏನಾದರೂ ಇದೆಯಾ ಎಂದು ಕೇಳಿದಾಗ ಅಬ್ದುಲ್ಲ ಅರಬಿಯಲ್ಲಿ ಹೆಸರು ಬರೆಯಲು ಬರುತ್ತದೆ, ನೂರರ ವರೆಗಿನ ಕೂಡಿಸು, ಕಳೆ ಲೆಕ್ಕ, ಸಾವಿರದ ವರೆಗಿನ ಎಣಿಕೆ ಬರುತ್ತದೆ ಎಂದಿದ್ದ. ಡ್ರೈವಿಂಗ್ ಗೊತ್ತಿದೆಯಾ ಎಂದು ಕೇಳಿದ್ದಕ್ಕೆ 'ಕುದುರೆ, ಒಂಟೆ ಸವಾರಿ ಮಾಡಬಲ್ಲೆ' ಅಂದಿದ್ದ! ಆದರೂ ಸಂಬಳ ಮತ್ತಿತರ ಸೌಲಭ್ಯಗಳ ಬಗ್ಗೆ ಚಕಾರವೆತ್ತದ ಆತನನ್ನು ಕೆಲಸಕ್ಕೆ ಸೇರಿಸಿಕೊಂಡು ಗೋದಾಮಿನ ಸಕಲ ಹೊಣೆ ನಿನ್ನದು ಎಂದು ಹೇಳಿ ಬೀಗದಕೈ ಕೊಟ್ಟಿದ್ದೆವು. ಇವತ್ತು ಮೂವತ್ತಮೂರು ಕಾರ್ಟನ್ ಕಂಟೈನರಿನಲ್ಲಿ ಬಂತು, ಐದು ಕಾರ್ಟನ್ ಡೆಲಿವರಿಗೆ ಕೊಟ್ಟಿದ್ದೇನೆ ಎಂದು ಟೆಲಿಫೋನ್ ಮಾಡಿ ಸ್ಟೋರ್‌ಕೀಪರಿಗೆ ತಿಳಿಸಿ ಸುಧಾರಿಸುತ್ತಿದ್ದ. ಸರಕು ಇಳಿಸಲು, ಹೊತ್ತೊಯ್ಯಲು ಆ ಇಡೀ ಸಮುಚ್ಚಯಕ್ಕೆ ದಿನವೊಂದಕ್ಕೆ ಆರೇಳು ವಾಹನಗಳು ಬಂದರೆ ದೊಡ್ಡದು. ಆಗೊಮ್ಮೆ ಈಗೊಮ್ಮೆ ಕಿಟಕಿ ಬಾಗಿಲೋ, ಮಾಡಿನ ತಗಡೋ ಬೀಸುಗಾಳಿಗೆ ಹೊಡೆದುಕೊಳ್ಳುವ ಶಬ್ದಗಳನ್ನು ಬಿಟ್ಟರೆ ಮಿಕ್ಕಂತೆ ಸ್ತಬ್ಧ ವಾತಾವರಣ. ಬೇರೆ ಬೇರೆ ಗೋದಾಮುಗಳ ಏಳೆಂಟು ವಾಚ್‌ಮ್ಯಾನ್‌ಗಳೇ ಆ ಪರಿಸರದ ಒಟ್ಟು ಜನಸಂಖ್ಯೆ. ನಮ್ಮ ಡ್ರೈವರುಗಳು ಹೇಳುವ ಹಾಗೆ ಇನ್ನೂ ರಾಜವಂಶದ ಗುಂಗು ಬಿಡಲಾಗದೆ ಅಬ್ದುಲ್ಲ ಅಲ್ಲಿದ್ದವರನ್ನೆಲ್ಲ ಪ್ರಜೆಗಳನ್ನಾಗಿ ತಿಳಿದುಕೊಂಡು, ಗೋದಾಮಿನ ಒಂದು ಮೂಲೆಯಲ್ಲೇ ತನ್ನ ಮಜ್ಲೀಸ್ ರಚಿಸಿಕೊಂಡು, ಇಡೀ ಸಮುಚ್ಚಯಕ್ಕೆ ತಾನೇ ರಾಜನಾಗಿದ್ದ! ಇತರ ಗೋದಾಮುಗಳ ಪಠಾನ್ ಹಾಗೂ ಮಲಬಾರೀ ಹುಡುಗರು ಆತನ ಮಜ್ಲೀಸಿನ ಕಾಯಂ ಸದಸ್ಯರು. ಹತ್ತು ಕಿ.ಮೀ. ದೂರದ ಪೆಟ್ರೋಲ್ ಪಂಪಿನಲ್ಲಿ ಕೆಲಸಕ್ಕಿದ್ದು ಇವರಿಗೆಲ್ಲ ಬೇಕಾಗುವ ದೈನಂದಿನ ದಿನಸಿಗಳನ್ನು ಸೈಕಲ್ಲಿನಲ್ಲಿ ತಂದುಕೊಡುತ್ತಿದ್ದ ಇಬ್ಬರು ಹುಡುಗರು ಮಜ್ಲೀಸಿನ ಅಪರೂಪದ ಹೆಚ್ಚುವರಿ ಸದಸ್ಯರು. ತನ್ನ ವೇತನದ ಸ್ವಲ್ಪಭಾಗವನ್ನು ಅಬ್ದುಲ್ಲ ಮಜ್ಲೀಸಿಗೆ ಬರುವವರ ಅತಿಥಿಸತ್ಕಾರಕ್ಕೆ ಖರ್ಚು ಮಾಡುತ್ತಿದ್ದ. ಅಬ್ದುಲ್ಲನನ್ನು ಅವರೆಲ್ಲ ಗೌರವಕೊಟ್ಟು ಶೇಖ್ ಎಂದೇ ಕರೆಯುತ್ತಿದ್ದರು, ಸಲಾಮು ಹೇಳುತ್ತಿದ್ದರು. ಸಿಗುವ ಗೌರವಕ್ಕೆ ಅಬ್ದುಲ್ಲನೂ ಹೆಮ್ಮೆ ಪಟ್ಟುಕೊಳ್ಳುತ್ತಿದ್ದ. ಹೀಗೆ ಅಬ್ದುಲ್ಲನ ರಾಜ್ಯದಲ್ಲಿ ರಾಜನೂ, ಪ್ರಜೆಗಳೂ ಸುಖವಾಗಿದ್ದರು.

★★★

ವರ್ಷಗಳ ಹಿಂದೆ, ನಮ್ಮ ಗೋದಾಮುಗಳ ಪರಿಶೀಲನೆಗೆಂದು ನಾನು ಹೋಗುವ ಕ್ರಮವಿತ್ತು. ಅತೀ ಹೆಚ್ಚು ಮೌಲ್ಯದ ಹತ್ತಾರು ಐಟಂಗಳನ್ನು ಪರಿಶೀಲನೆ ನಡೆಸಿ, ಇಡೀ ಗೋದಾಮು ಉದ್ದಕ್ಕೂ ಅಡ್ಡಕ್ಕೂ ಒಮ್ಮೆ ನಡೆದು ಎಲ್ಲವೂ ಕ್ರಮಬದ್ಧವಾಗಿವೆಯೇ ಎಂದು ನೋಡಿಕೊಂಡು ಬರುತ್ತಿದ್ದೆ. ಅಬ್ದುಲ್ಲನನ್ನು ನೇಮಿಸಿಕೊಂಡ ಬಳಿಕ ಅವನ ಗೋದಾಮಿಗೆ ಮೊದಲ ಬಾರಿಗೆ ಹೋಗಿದ್ದೆ. ಡ್ರೈವರ್ ಮತ್ತು ನಾನು, ಬೆಳಿಗ್ಗೆ ಆಫೀಸಿನಿಂದ ಹೊರಟು